ಅಧ್ಯಕ್ಷರು: ನೋಡಿ ನೀವು ಕೊಟ್ಟಿದ್ದರಿಂದ ಎಂದು ಹೇಳಿದಿರಿ, ಇದೆನಾ ನೀವು ತೀರ್ಪು ಕೊಡುವುದು? ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರಂತೆ, ಅವರು ಕೊಡುವುದಕ್ಕೆ ರೆಡಿ ಇದ್ದಾರೆ.

ಶ್ರೀ ಸಿದ್ಧರಾಮಯ್ಯ: ಯಡಿಯೂರಪ್ಪನವರೆ, ಊಟ ಮಾಡಿಕೊಂಡು 3 ಗಂಟೆಗೆ ಉತ್ತರ ಕೊಟ್ಟರೆ ಏನಾಗುತ್ತದೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಈ ಬಗ್ಗೆ ಅಧ್ಯಕ್ಷರ ತೀರ್ಮಾನದಂತಾಗಲಿ.

ಅಧ್ಯಕ್ಷರು: ಅದೆಲ್ಲಾ ನಮ್ಮ ತಪ್ಪಿನಿಂದ ಆಗಿರುವುದು. ನಾನು ಒಂದು ಗಂಟೆಗೆ ನಿಲ್ಲಿಸಬೇಕೆಂದು ಇದ್ದೆ. ನೀವು ಎಲ್ಲಾ ತಲೆ ಮೇಲೆ ಕುಳಿತು ಜುಟ್ಟು ಹಿಡಿದು ಅಲ್ಲಾಡಿಸಿ, ಒಂದು ಗಂಟೆ extend ಮಾಡಿಸಿದಿರಿ.

ಶ್ರೀ ಸಿದ್ದರಾಮಯ್ಯ: ನಮಗೆ ಧನ್ಯವಾದಗಳು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ದರಾಮಣ್ಣನವರು 3.00 ಗಂಟೆಗೆ ಉತ್ತರ ಕೊಡಿ ಎಂದು ಹೇಳುತ್ತಿದ್ದಾರೆ. ಹಾಗೆಯೇ ಆಗಲಿ.

ಅಧ್ಯಕ್ಷರು: ಈಗ ಸದನವನ್ನು ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಎರಡು ಗಂಟೆ ಒಂದು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಅಪರಾಹ್ನ 3.00 ಗಂಟೆಗೆ ಸೇರುವಂತೆ ನಿರ್ಧರಿಸಲಾಯಿತು)

(ಸಭೆಯು ಭೋಜನ ವಿರಾಮದ ನಂತರ ಮಧ್ಯಾಹ್ನ 3.28 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

5. ಚುನಾವಣಾ ಪ್ರಸ್ತಾವ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಡಳಿತ ಮಂಡಳಿಗೆ ಒಬ್ಬ ವಿಧಾನಸಭಾ ಸದಸ್ಯರನ್ನು ಚುನಾಯಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ಎಂ.ಪಿ.ಪ್ರಕಾಶ್ (ಗೃಹ, ಕಾನೂನು,ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ) ಪರವಾಗಿ, ಮಾನ್ಯ ಅಧ್ಯಕ್ಷರೆ, 1991ರ ಹಂಪಿ ಕನ್ನಡ ವಿಶ್ವವಿದಾಲಯದ ಅಧಿನಯಮದ ಅಧ್ಯಾಯ-3(19(1)(ಎನ್)ರ ರೀತ್ಯಾ ಸದರಿ

ವಿಶ್ವವಿದ್ಯಾಲಯ ಆಡಳಿತ ಮಂಡಳಿಗೆ ಒಬ್ಬ ವಿಧಾನಸಭಾ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು: ಪ್ರಸ್ತಾಪ ಮಂಡಿಸಲಾಯಿತು.

6. <u>ನಿಯಮ 69ರ ಮೇರೆಗೆ ನಡೆದ, ಚರ್ಚೆಗೆ ಉತ್ತರ:</u>

<u>ವಿಶೇಷ ಆರ್ಥಿಕ ವಲಯದ (Special Economic Zone) ಬಗ್ಗೆ</u>

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ, ನನ್ನೆಯಿಂದ ಸದನದಲ್ಲಿ ಹಲವಾರು ಜನ ವಿರೋಧ ಪಕ್ಷದ ಪ್ರಮುಖ ಸದಸ್ಯರು S.E.Z. ಅಂದರೆ ವಿಶೇಷ ಆರ್ಥಿಕ ವಲಯದ ಬಗ್ಗೆ ಬಹಳ ವಿವರವಾದ ಚರ್ಚೆಯನ್ನು ಮಾಡಿದ್ದಾರೆ. ನಮ್ಮ ಸರ್ಕಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ, ಭಂಡ ಸರ್ಕಾರ ಎಂದೆಲ್ಲಾ ಹೇಳಿದ್ದಾರೆ. ಇವತ್ತು ರೈತರನ್ನು ಕಗ್ಗೊಲೆ ಮಾಡಲಿಕ್ಕೆ ಹೊರಟಿದ್ದಾರೆ. ರೈತರನ್ನು ನಿರ್ಗತಿಕರನ್ನಾಗಿ ಮಾಡಲು ಹೊರಟಿದ್ದಾರೆ, ಈ ರೀತಿಯ ಚರ್ಚೆಗಳು ಆಗಿವೆ. ಈ ವಿಶೇಷ ಆರ್ಥಿಕ ವಲಯದ ಬಗ್ಗೆ ಸದನದಲ್ಲಿ ನಿನ್ನೆ ಚರ್ಚೆಯಾದರೂ, ಇದು ಸುಮಾರು ಎರಡು ತಿಂಗಳಿಂದ ಸದನದ ಹೊರಗೆ ಹಲವಾರು ಸಂದರ್ಭಗಳಲ್ಲಿ ಚರ್ಚೆಗೆ ಗ್ರಾಸವಾಗಿರತಕ್ಕಂಥ, ಪ್ರಮುಖವಾಗಿರತಕ್ಕಂಥಾದ್ದಾಗಿದೆ. ಸರ್ಕಾರದ ನಿರ್ಣಯಗಳ ಬಗ್ಗೆ ನನಗೂ ಗಾಬರಿಯಾಗತಕ್ಕಂಥ ಹೇಳಿಕೆಗಳು ಬರುತ್ತಿವೆ. ನನಗೂ, ಎಲ್ಲೋ ಒಂದು ಕಡೆ ನಾವು ತಪ್ಪು ಎಸಗಿದ್ದೇವೇನೋ ಎನ್ನುವ ರೀತಿಯಲ್ಲಿ ಗಾಬರಿಯಾಯಿತು. ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಒಂದು ಸತ್ಯ ಸಂಶೋಧನಾ ಸಮಿತಿಯನ್ನು ಮಾಡಿ, ಅವರ ಪಕ್ಷ ಪ್ರಮುಖರುಗಳನ್ನು ಆ ಸಮಿತಿಗೆ ಆಯ್ಕೆ ಮಾಡಿ, ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಗಳಿಗೆ ಭೇಟಿ ಕೊಟ್ಟು, ಆ ಸಮಿತಿ ವರದಿಯನ್ನು ನಿನ್ನೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಿಗೆ ತಲುಪಿಸಿದ್ದಾರೆ. ಆ ವರದಿಯ ಆಧಾರದ ಮೇಲೆ ನಿನ್ನೆಯಿಂದ ಇಲ್ಲಿ ಹಲವಾರು ಸದಸ್ಯರುಗಳ ಚರ್ಚೆಯನ್ನು ಮಾಡಿರತಕ್ಕಂಥಾದ್ದನ್ನು ನಾನು ಗಮನಿಸಿದ್ದೇನೆ. ಎಲ್ಲಾ ಸದಸ್ಯರ ಭಾವನೆಗಳೇನವೆ, ರೈತರ ಬಗ್ಗೆ ಅವರು ವ್ಯಕ್ತಪಡಿಸಿರತಕ್ಕಂಥ ಕಾಳಜಿ, ಕಳಕಳಿ ಏನಿದೆ, ಅದರಲ್ಲೂ ಪ್ರಮುಖವಾಗಿ ಕಾಂಗ್ರೆಸ್ ಪಕ್ಷದ ಸದಸ್ಯರು ಇತ್ತೀಚಿನ ದಿನಗಳಲ್ಲಿ ರೈತರ ರಕ್ಷಣೆಯ ಬಗ್ಗೆ ಏನು ಚರ್ಚೆ ಮಾಡುತ್ತಿದ್ದಾರೆ, ರೈತರ ಜಮೀನನ್ನು ಉಳಿಸತಕ್ಕಂಥಾದ್ದರ ಬಗ್ಗೆ ಏನು ಚರ್ಚೆ ಮಾಡುತ್ತಿದ್ದಾರೆ, ಇದು ನಿಜಕ್ಕೂ ರಾಜ್ಯದಲ್ಲಿ ನಾವು ಒಂದು ಹೊಸ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಅದಕ್ಕಾಗಿ